# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. | 344 |
| ಸದಸ್ಯರ ಹೆಸರು | ಡಾ॥ ತೇಜಸ್ವಿನಿ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | ಮುಖ್ಯಮಂತ್ರಿ |
| ಉತ್ತರದ ದಿನಾಂಕ | 12-07-2018 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಹಾಗೂ ಮಾರಾಟವಾಗುತ್ತಿರುವ ಮದ್ಯದ ಪ್ರಮಾಣವೆಷ್ಟು; ಯಾವ್ಯಾವ ವಿಧದ ಮದ್ಯ ತಯಾರಿಕೆಯಾಗುತ್ತಿದೆ; ಉತ್ಪಾದನೆಯಲ್ಲಿ ಬಳಕೆಯಾಗುತ್ತಿರುವ ಕಚ್ಚಾ ಸಾಮಗ್ರಿಗಳೇನು; ಎಲ್ಲಿಂದ, ಯಾರಿಂದ ಪಡೆಯಲಾಗುತ್ತದೆ; | 2017-18ನೇ ಆರ್ಥಿಕ ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ 50.67 ಕೋಟಿ ಬಲ್ಕ್ ಲೀಟರ್ ಮದ್ಯ ಉತ್ಪಾದನೆ ಹಾಗೂ 48.17 ಕೋಟಿ ಬಲ್ಕ್ ಲೀಟರ್ ಮದ್ಯ ಮಾರಾಟವಾಗಿರುತ್ತದೆ.<br>ಮದ್ಯ ಉತ್ಪಾದನಾ ಘಟಕಗಳಲ್ಲಿ ವಿಸ್ಕಿ, ಬ್ರಾಂಡಿ, ರಮ್, ಜಿನ್, ವೋಡ್ಕ ಮತ್ತು ಲೋ ಆಲ್ಕೋಹಾಲಿಕ್ ಬಿವರೇಜಸ್ ಮಾದರಿಯ ಮದ್ಯಗಳು ತಯಾರಿಕೆಯಾಗುತ್ತಿವೆ.<br>ಮದ್ಯ ಉತ್ಪಾದನೆಯಲ್ಲಿ ನ್ಯೂಟ್ರಲ್ ಸ್ಪಿರಿಟ್, ಹೈ ಬೊಕೆಟ್ ಸ್ಪಿರಿಟ್, ಗ್ರೇನ್ ನ್ಯೂಟ್ರಲ್ ಸ್ಪಿರಿಟ್, ಮಾಲ್ಟ್ ಸ್ಪಿರಿಟ್, ಗ್ರೇಪ್ ಸ್ಪಿರಿಟ್, ಕ್ಯಾರಮಲ್ (Caramel), Essence, flavors, de-mineralized water ಕಚ್ಚಾ ಸಾಮಗ್ರಿಗಳು ಬಳಕೆಯಾಗುತ್ತಿವೆ. |
| | | ಮದ್ಯ ಉತ್ಪಾದನಾ ಘಟಕಗಳು ವಿವಿಧ ರೀತಿಯ ಸ್ಪಿರಿಟ್‌ಗಳನ್ನು ಪ್ರಾಥಮಿಕ ಡಿಸ್ಟಿಲರಿಗಳಿಂದ ಮತ್ತು ಇತರೆ ಕಚ್ಚಾ ಸಾಮಗ್ರಿಗಳನ್ನು ಅವರ ವಿವೇಚನೆಯನುಸಾರ ಇತರೆ ಸರಬರಾಜುದಾರರುಗಳಿಂದ ಪಡೆಯುತ್ತಾರೆ. |
| ಆ | ಉತ್ಪಾದನೆಯಲ್ಲಿ ಪರವಾನಗಿ ಪಡೆದಿರುವ ಸಂಸ್ಥೆಗಳು/ಕಂಪನಿಗಳ ಹೆಸರೇನು; ಅವುಗಳು ಪಾಲಿಸುತ್ತಿರುವ ಆರೋಗ್ಯ ಸುರಕ್ಷಾ ಕ್ರಮಗಳಾವುವು; | 2017-18ನೇ ಸಾಲಿಗೆ ಮದ್ಯ ಉತ್ಪಾದನೆಗೆ ಪರವಾನಗಿ ಪಡೆದಿರುವ ಸಂಸ್ಥೆಗಳು/ಕಂಪನಿಗಳ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.<br>ಕರ್ನಾಟಕ ಅಬಕಾರಿ ನಿಯಮಗಳನ್ವಯ ಪಾನೀಕರ ಆರೋಗ್ಯದ ಹಿತದೃಷ್ಟಿಯಿಂದ ಪ್ರತಿ ಬ್ಯಾಚ್‌ನ ಮದ್ಯವನ್ನು ಮದ್ಯ ಉತ್ಪಾದನಾ ಘಟಕದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ "ಮಾನವ ಸೇವನೆಗೆ ಯೋಗ್ಯ"ವೆಂದು ರಾಸಾಯನಿಕ ತಜ್ಞರು ದೃಢೀಕರಿಸಿದ ನಂತರ, ಅಬಕಾರಿ ಇಲಾಖೆಯ ಮುಖ್ಯ ರಾಸಾಯನಿಕ ತಜ್ಞರಿಂದ "ಮಾನವ ಸೇವನೆಗೆ ಯೋಗ್ಯ"ವೆಂದು ದೃಢೀಕರಣ ಪಡೆದ ನಂತರವೇ ಮಾರಾಟಕ್ಕೆ ಅವಕಾಶ ನೀಡಲಾಗುತ್ತದೆ. ಅಲ್ಲದೆ, ಕೇಂದ್ರ ಸರ್ಕಾರದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಅಧಿನಿಯಮ, 2006 (Food Safety and Standards Act, 2006) ಅನ್ವಯ ಮದ್ಯವನ್ನು ಆಹಾರ ಪದಾರ್ಥವನ್ನಾಗಿ ಪರಿಗಣಿಸಿರುವುದರಿಂದ ಮದ್ಯ ಉತ್ಪಾದಕರು FSSAI ಪರವಾನಗಿಯನ್ನು ಪಡೆಯುವುದು ಕಡ್ಡಾಯವಾಗಿದೆ. |
| ಇ | ಮದ್ಯಪಾನಿಗಳಲ್ಲಿ ಪುರುಷರ-ಮಹಿಳೆಯರ ಸಂಖ್ಯೆ ಎಷ್ಟು; ಸಾಮಾಜಿಕವಾಗಿ ಬಡವ, ಮಧ್ಯಮ ಹಾಗೂ ಶ್ರೀಮಂತರ ಸಂಖ್ಯೆ ಎಷ್ಟು; (Consumer Ratio) | ಮದ್ಯಪಾನಿಗಳ ನಿರ್ದಿಷ್ಟ ಸಂಖ್ಯೆಯನ್ನು ಗುರುತಿಸಲು ಕಷ್ಟಸಾಧ್ಯ. |

| | | |
|---|---|---|
| ಈ | ಮದ್ಯಪಾನ ದುಷ್ಪರಿಣಾಮಗಳ ಬಗ್ಗೆ ಕಾನೂನು ರೀತಿಯ ಎಚ್ಚರಿಕೆ ಜಾಗೃತಿ ಕಾರ್ಯಕ್ರಮ ಜಾರಿ ಸಮರ್ಪಕವಾಗಿ ನಡೆದಿದೆಯೇ? (ವಿವರ ನೀಡುವುದು) | ಹೌದು.<br><br>ಮದ್ಯಪಾನ ದುಷ್ಪರಿಣಾಮಗಳ ಬಗ್ಗೆ ಕಾನೂನು ರೀತಿಯ ಎಚ್ಚರಿಕೆ ಜಾಗೃತಿ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ನಡೆಸಲಾಗುತ್ತದೆ. ಆಯಾ ಜಿಲ್ಲೆಯ ಅಬಕಾರಿ ಉಪ ಆಯುಕ್ತರುಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ಜಿಲ್ಲಾ ಮಟ್ಟದಲ್ಲಿ ನಡೆಸುವ ಕಾರ್ಯಕ್ರಮಗಳಿಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುವಂತೆ ಸುತ್ತೋಲೆ ಹೊರಡಿಸಲಾಗಿದೆ.<br><br>ಮುಂದುವರೆದು, ಅಬಕಾರಿ ಇಲಾಖಾ ವತಿಯಿಂದ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸಿ, ನಕಲಿ ಮದ್ಯ/ವಿಷಪೂರಿತ ಮದ್ಯ/ಕಳ್ಳಭಟ್ಟಿ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 50 ರಂತೆ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವಲ್ಲಿ ಸಾರ್ವಜನಿಕರ ಜವಾಬ್ದಾರಿ/ಹೊಣೆಗಾರಿಕೆ ಬಗ್ಗೆ ಅರಿವು ಮೂಡುವಂತೆ ತಿಳುವಳಿಕೆ ಪತ್ರಗಳನ್ನು ಚುನಾಯಿತ ಪ್ರತಿನಿಧಿಗಳಿಗೆ ಹಾಗೂ ಕಂದಾಯ ಅಧಿಕಾರಿಗಳಿಗೆ ಜಾರಿ ಮಾಡಲಾಗುತ್ತಿದೆ. ಅಲ್ಲದೆ, ಪ್ರತಿ ಮದ್ಯದ ಬಾಟಲಿಯ ಮೇಲೆ "ಮದ್ಯಪಾನ ಸೇವನೆ ಆರೋಗ್ಯಕ್ಕೆ ಹಾನಿಕರ" ಎಂಬ ಶಾಸನಬದ್ಧ ಎಚ್ಚರಿಕೆಯನ್ನು ಮುದ್ರಿಸಲಾಗುತ್ತಿದೆ. |

ಆಇ 50 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಅನುಬಂಧ

## 2017-18 ನೇ ಸಾಲಿಗೆ ಮದ್ಯಉತ್ಪಾದನೆಗೆ ಪರವಾನಗಿ ಪಡೆದಿರುವ ಸಂಸ್ಥೆಗಳು/ಕಂಪನಿಗಳು

| ಕ್ರ ಸಂ | ಹೆಸರು |
|---|---|
| 1. | ಮೆ: ಜೆ.ಪಿ. ಡಿಸ್ಟಿಲರೀಸ್ ಪ್ರೈವೇಟ್ ಲಿ, ನಂ.8, ಮಾಕಳಿ, ದಾಸನಪುರಹೋಬಳಿ, ಬೆಂಗಳೂರು ಉತ್ತರ |
| 2. | ಮೆ: ಯುನೈಟೆಡ್ ಸ್ಪಿರಿಟ್ಸ್ ಲಿ, ಲೆಸ್ಸಿ ಆಫ್ ಮೆ: ಕೆ.ಬಿ.ಡಿ. ಶುಗರ್ಸ್ಅಂಡ್ ಡಿಸ್ಟಿಲರೀಸ್ ಪ್ರೈವೇಟ್ ಲಿ. ಯುನಿಟ್ ನಂ.2, ವಿಶ್ವೇಶ್ವರಪುರಗ್ರಾಮ, 20ನೇ ಮೈಲಿ, ತುಮಕೂರುರಸ್ತೆ, ನೆಲಮಂಗಲ ತಾ, ಬೆಂಗಳೂರು ಗ್ರಾಮಾಂತರಜಿಲ್ಲೆ. |
| 3. | ಮೆ: ಖೋಡೆ ಆರ್.ಸಿ.ಎ. ಇಂಡಸ್ಟ್ರೀಸ್, ನಂ.11, ರೇಸ್‌ಕೋರ್ಸ್‌ರಸ್ತೆ, ಬೆಂಗಳೂರು-9 |
| 4. | ಮೆ: ಯುನೈಟೆಡ್ ಸ್ಪಿರಿಟ್ಸ್ ಲಿ, ಯುನಿಟ್: ಕುಂಬಳಗೋಡು. ಬೆಂಗಳೂರು-74. |
| 5. | ಮೆ: ಶಶಿ ಡಿಸ್ಟಿಲರೀಸ್ ಪ್ರೈವೇಟ್ ಲಿ, ಸರ್ವೆ ನಂ.67/1, ಹುಳಿಮಾವು, 501/ಎ-4, 9ನೇ ಮೈಲಿ, ಬನ್ನೇರುಘಟ್ಟರಸ್ತೆ, ಬೆಂಗಳೂರು-76. |
| 6. | ಮೆ: ಓರಿಯನ್ ಡಿಸ್ಟಿಲರೀಸ್. ನಂ.1, ಕೈಗಾರಿಕಾ ಪ್ರದೇಶ, ಯಶವಂತಪುರ. ಬೆಂಗಳೂರು-22. |
| 7. | ಮೆ: ಸರ್ವದಾ ಡಿಸ್ಟಿಲರೀಸ್, ಕೋರ್ಟರಸ್ತೆ, ಬಡಗಬೆಟ್ಟು, ಉಡುಪಿ ತಾ:,ಉಡುಪಿ ಜಿಲ್ಲೆ. |
| 8. | ಮೆ: ರ್‍ಯಾಡಿಕೊಖೈತಾನ್ ಲಿಮಿಟೆಡ್ (ಲೆಸ್ಸಿ ಆಫ್‌ಯೆಜ್ಡಿ ಡಿಸ್ಟಿಲರೀಸ್) ನಂ.140, 143, ಬನ್ನಿಮಂಟಪ ಲೇಔಟ್, ಮೈಸೂರು. |
| 9. | ಮೆ: ಬಕಾರ್ಡಿಇಂಡಿಯಾ ಪ್ರೈವೇಟ್ ಲಿಮಿಟೆಡ್, ಚಾಮರಾಜನಗರರಸ್ತೆ, ನಂಜನಗೂಡು, ಮೈಸೂರುಜಿಲ್ಲೆ. |
| 10. | ಮೆ: ಯುನಿಸ್ಟಿಲ್ ಆಲ್ಕೋಬ್ಲೆಂಡ್ಸ್ ಪ್ರೈ. ಲಿ, ಸರ್ವೆ ನಂ.139/1, 140/1 & 140/2, ಸೋಲೂರು, ಮಾಗಡಿತಾ, ರಾಮನಗರಜಿಲ್ಲೆ. |
| 11. | ಮೆ: ಕಾಲ್ಸ್ ಡಿಸ್ಟಿಲರೀಸ್‌ಕರ್ನಾಟಕ ಪ್ರೈವೇಟ್ ಲಿ, ಸರ್ವೆ ನಂ.72-75, ಅವರೆಗೆರೆ, ಕುಣಿಗಲ್‌ತಾ, ತುಮಕೂರುಜಿಲ್ಲೆ. |
| 12. | ಮೆ: ಪೆರ್ನಾರ್ಡ್‌ರೆಕಾರ್ಡ್‌ಇಂಡಿಯ ಪ್ರೈವೇಟ್ ಲಿ (ಲೆಸ್ಸಿ: ಮೆ: ಯುನಿವರ್ಸಲ್ ಬಾಟ್ಲರ್ಸ್ ಪ್ರೈವೇಟ್ ಲಿ), ಸರ್ವೆ ನಂ.20,42,43/1, 43/2, ಮರೋಹಳ್ಳಿ ಮತ್ತು ಸರ್ವೆ ನಂ.13/1 ಮಲೋನಗಟ್ಟಿಹಳ್ಳಿ, ಕಸಬ ಹೋಬಳಿ, ನೆಲಮಂಗಲ ತಾ, ಬೆಂಗಳೂರು ಗ್ರಾಮಾಂತರಜಿಲ್ಲೆ. |
| 13. | ಮೆ: ಸಿಂಗಲ್ ಮಾಲ್ಟ್ ಸ್ಪಿರಿಟ್ಸ್ ಇಂಡಿಯ ಪ್ರೈವೇಟ್ ಲಿ, ಪ್ಲಾಟ್ ನಂ.422, ಬೈಕಂಪಾಡಿಕೈಗಾರಿಕಾ ಪ್ರದೇಶ, ಮಂಗಳೂರು ತಾ, ದ.ಕ. ಜಿಲ್ಲೆ. |
| 14. | ಮೆ: ಅಲೈಡ್ ಬ್ಲೆಂಡರ್ಸ್ ಮತ್ತು ಡಿಸ್ಟಿಲರ್ಸ್ ಪ್ರೈ. ಲಿ, ತುಮಕೂರುರಸ್ತೆ, ನಾಗಸಂದ್ರ, ಬೆಂಗಳೂರು. |
| 15. | ಮೆ: ಯುನೈಟೆಡ್ ಸ್ಪಿರಿಟ್ಸ್ ಲಿ, (ಲೆಸ್ಸಿ ಆಫ್‌ಚಾಮುಂಡಿ ವೈನರಿಅಂಡ್ ಡಿಸ್ಟಿಲರಿ) ನಂ.56, ಚೋಳಪ್ಪನಹಳ್ಳಿ, ಕಸಬ ಹೋಬಳಿ, ಬಿ.ಸಿ. ರಸ್ತೆ, ಹೊಸಕೋಟೆತಾ, ಬೆಂಗಳೂರು ಗ್ರಾಮಾಂತರಜಿಲ್ಲೆ. |
| 16. | ಮೆ: ಕಲ್ಪತರು ಬ್ರೀವರೀಸ್ ಮತ್ತು ಡಿಸ್ಟಿಲರೀಸ್ ಪ್ರೈ. ಲಿ., ಸೋಮಪುರ ಇಂಡಸ್ಟ್ರೀಯಲ್ ಏರಿಯಾ, ದಾಬಸಪೇಟ, ನೆಲಮಂಗಲ, ಬೆಂಗಳೂರು ಗ್ರಾಮಾಂತರಜಿಲ್ಲೆ. |
| 17. | ಮೆ: ಯುನೈಟೆಡ್ ಸ್ಪಿರಿಟ್ಸ್ ಲಿ, ಪ್ಲಾಟ್ ನಂ 20, ಸರ್ವೆ ನಂ.95, ನಂದೂರ್‌ಕೆಸರಟ್ಟಗಿ ಇಂಡಸ್ಟ್ರಿಯಲ್ ಏರಿಯಾ, ಕಲಬುರಗಿ. |

....2

| | |
|---|---|
| 18. | ಮೆ: ಯುನೈಟೆಡ್ ಸ್ಪಿರಿಟ್ಸ್ ಲಿ, (ಲೆಸ್ಸಿ ಆಫ್ ಮೆ: ಸಹ್ಯಾದ್ರಿ ಶುಗರ್‌ಅಂಡ್ ಡಿಸ್ಟಿಲರೀಸ್ ಪ್ರೈವೇಟ್ ಲಿ.) ಪ್ಲಾಟ್ ನಂ.122, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ ಹೆಚ್‌ಎನ್ ಪುರರಸ್ತೆ, ಹಾಸನ, ಹಾಸನ ಜಿಲ್ಲೆ. |
| 19. | ಮೆ: ವಾಷ್ಕಿ ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್, ಸರ್ವೆ ನಂ.140, ತಾವರಗೆರೆ ಹಳ್ಳಿ ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ. |
| 20. | ಮೆ:ಯುನೈಟೆಡ್ ಸ್ಪಿರಿಟ್ಸ್ ಲಿ, ಲೆಸ್ಸಿ ಆಫ್ ಮೆ: ಕೆ.ಬಿ.ಡಿ. ಶುಗರ್ಸ್‌ಅಂಡ್ ಡಿಸ್ಟಿಲರೀಸ್ ಪ್ರೈವೇಟ್ ಲಿ, ನೂಲ್ವಿಕ್ರಾಸ್, ಪಿ.ಬಿ.ರಸ್ತೆ, ಹುಬ್ಬಳ್ಳಿ, ಧಾರವಾಡಜಿಲ್ಲೆ. |
| 21. | ಮೆ: ಅಮೃತ್ ಡಿಸ್ಟಿಲರೀಸ್ ಪ್ರೈಲಿ, ಹೊನಗಾ ಇಂಡಸ್ಟ್ರಿಯಲ್ ಏರಿಯಾ, ಬೆಳಗಾವಿ ಜಿಲ್ಲೆ |
| 22. | ಮೆ: ಜಾನ್ ಡಿಸ್ಟಿಲರೀಸ್ ಪ್ರೈಲಿ, ನಂ.10, ಪಂತರಪಾಳ್ಯ, ಮೈಸೂರುರಸ್ತೆ, ಬೆಂಗಳೂರು–39. |
| 23. | ಮೆ: ಎಂಪೀ ಡಿಸ್ಟಿಲರೀಸ್ ಲಿ, ಸರ್ವೆ ನಂ.51/1,/2, ಅರಾಭಿಕೊತ್ತನೂರುಗ್ರಾಮ, ನರಸಾಪುರ, ಕೋಲಾರಜಿಲ್ಲೆ |
| 24. | ಮೆ: ಹರ್ಮ್ಸ ಡಿಸ್ಟಿಲರಿ ಪ್ರೈ ಲಿ, ಸರ್ವೆ ನಂ.98/1ಬಿ/3,98/1ಬಿ/4,98/1/ಬಿ/5, 96/3, 96/5, ಯಡ್ರಾವಗ್ರಾಮ, ರಾಯಭಾಗತಾಲ್ಲೂಕು, ಬೆಳಗಾವಿ ಜಿಲ್ಲೆ |
| 25. | ಮೆ:ಖೋಡೆಇಂಡಿಯ ಲಿ, ನಂ.54, ಕನ್ನಯಕನಅಗ್ರಹಾರ, ಬೆಂಗಳೂರು–62. |
| 26. | ಮೆ: ಯುನೈಟೆಡ್ ಸ್ಪಿರಿಟ್ಸ್ ಲಿ, ಯುನಿಟ್ ಹೊಸಪೇಟೆ, ಎಲ್.ಎಸ್.ಆರ್‌ಕಂಪೌಂಡ್, ಚಿತವಟಗಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ. |
| 27. | ಮೆ: ದಿ ಉಗಾರ್ ಶುಗರ್ ವರ್ಕ್ಸ್ ಲಿ, ಉಗಾರ್‌ಖುರ್ದ, ಅಥಣಿತಾ:, ಬೆಳಗಾವಿ ಜಿಲ್ಲೆ. |
| 28. | ಮೆ: ಎಸ್.ಎಲ್.ಎಸ್. ಡಿಸ್ಟಿಲರೀಸ್ ಪ್ರೈವೇಟ್ ಲಿ, ಸರ್ವೆ ನಂ.459/1, 459/5, ಗರಗ, ಧಾರವಾಡಜಿಲ್ಲೆ. |
| 29. | ಮೆ: ವಿಶ್ವರಾಜ್ ಶುಗರ್ ಇಂಡಸ್ಟ್ರೀಸ್ ಲಿ,-ಬೆಲ್ಲದ ಬಾಗೇವಾಡಿಗ್ರಾಮ, ಹುಕ್ಕೇರಿತಾ:, ಬೆಳಗಾವಿ ಜಿಲ್ಲೆ. |
| 30. | ಮೆ: ಅಮೃತ್ ಡಿಸ್ಟಿಲರೀಸ್ ಪ್ರೈಲಿ, ಯುನಿಟ್ ನಂ.2, ಸರ್ವೆ ನಂ.49, ಕಂಬೀಪುರ, ಬೆಂಗಳೂರು–74. |
| 31. | ಮೆ:ಜಾನ್ ಡಿಸ್ಟಿಲರೀಸ್ ಪ್ರೈ ಲಿ., (ಲೆಸ್ಸಿ ಆಫ್‌ಇಂಡಿಯನ್‌ಕೇನ್ ಪವರ್ ಲಿ., ಯೂನಿಟ್: ಸ್ಟ್ಯಾಂಸನ್ಸ್ ಡಿಸ್ಟಿಲರೀಸ್ ಪ್ರೈವೇಟ್ ಲಿ) ಸರ್ವೆ ನಂ.233, ದುಗ್ಗಾವತಿಗ್ರಾಮ, ಹರಪನಹಳ್ಳಿ ತಾ:,ದಾವಣಗೆರೆಜಿಲ್ಲೆ. |
| 32. | ಮೆ: ವುಡ್‌ಪೆಕ್ಕರ್ ಡಿಸ್ಟಿಲರೀಸ್ ಮತ್ತುಬ್ರೀವರೀಸ್ ಪ್ರೈ ಲಿ., ಪ್ಲಾಟ್ ನಂ.96, 97 ಮತ್ತು 10, ಹಾಸನ ಇಂಡಸ್ಟ್ರೀಯಲ್ ಏರಿಯಾ, ಹಾಸನ |

ಆಇ 50 ಇಎಲ್‌ಕ್ಯೂ 2018

(ವೆಂಕಟೇಶ್.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ).